# ಜೀವವೈವಿಧ್ಯ ವಾರ್ತಾಪತ್ರ

# BIODIVERSITY News Letter

## ಕರ್ನಾಟಕ ಜೀವವೈವಿಧ್ಯ ಮಂಡಳಿ

(ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರ್ಕಾರ)

ನೆಲಮಹಡಿ, ವನ ವಿಕಾಸ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003

ಸಂಪುಟ : 1 ಸಂಚಿಕೆ : 2 ISSN 0975 -1289 ಏಪ್ರಿಲ್–ಜೂನ್ 2019


### ಅಧ್ಯಕ್ಷರ ನುಡಿ



ಜೀವವೈವಿಧ್ಯದ ಎರಡನೆ ಸಂಚಿಕೆಯ ವಾರ್ತಾ ಪತ್ರವನ್ನು ಹಂಚಿಕೊಳ್ಳಲು ನಾವು ಉತ್ಸುಕರಾಗಿದ್ದೇವೆ. ಏಪ್ರಿಲ್‌ನಿಂದ ಜೂನ್ ಮಾಹೆವರೆಗೂ ಮಂಡಳಿಯಲ್ಲಿ ನಡೆದ ಎಲ್ಲಾ ಚಟುವಟಿಕೆಗಳ ಸುದ್ದಿ ಮತ್ತು ಛಾಯಾಚಿತ್ರಗಳನ್ನು ಒಳಗೊಂಡಿರುವ ಈ ವಾರ್ತಾಪತ್ರವು ಅತ್ಯಂತ ಆಕರ್ಷಕವಾಗಿ ಸಾಮಾನ್ಯ ಜನರಿಗೆ ಮನಮುಟ್ಟುವಂತೆ ಪ್ರಕಟಣೆಗೊಳ್ಳುತ್ತಿರುವುದು ಸಂತಸದ ವಿಷಯ.

ಜೈವಿಕ ವೈವಿಧ್ಯ ಅಧಿನಿಯಮಗಳು, 2002 ಹಾಗೂ ಅದರ ನಿಬಂಧನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಇನ್ನೂ ಹೆಚ್ಚಿನ ರೀತಿಯಲ್ಲಿ ಬಲವರ್ಧನೆಗೊಳ್ಳಲು, ರಾಜ್ಯದ ಪ್ರತಿಯೊಂದು ತಾಲ್ಲೂಕುಗಳ ಸ್ಥಳೀಯ ಮಟ್ಟದಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ಜಾಗೃತಿ ಮೂಡಿಸಲು ಜೂನ್ ತಿಂಗಳಿನಲ್ಲಿ ತರಬೇತಿ ಕಾರ್ಯಕ್ರಮವನ್ನು SATCOM ಮೂಲಕ ರಾಜ್ಯದ 139 ತಾಲ್ಲೂಕು ಪಂಚಾಯಿತಿಗಳ ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ಏಕಕಾಲದಲ್ಲಿ ಹಮ್ಮಿಕೊಳ್ಳಲಾಗಿ ಕಾರ್ಯಕ್ರಮವು ಅತ್ಯಂತ ಸೊಗಸಾಗಿ ಮೂಡಿ ಬಂದಿದೆ.

ಅಲ್ಲದೇ, ಪ್ರತಿ ವರ್ಷದಂತೆ ಈ ವರ್ಷವೂ ಕೂಡ 2019ನೇ ಸಾಲಿನ ‘ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ’ಯನ್ನು ಆಚರಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲಾಯಿತು.

ಇನ್ನೂ ಹಲವಾರು ಕಾರ್ಯಚಟುವಟಿಕೆಗಳನ್ನು ಕೈಗೊಂಡು ಮಂಡಳಿಯು ಇನ್ನಷ್ಟು ಸಾಧನೆಗಳನ್ನು ಯಶಸ್ವಿಯಾಗಿ ಪೂರೈಸಲಿ ಎಂದು ಆಶಿಸುತ್ತಾ ಈ ಸಂಚಿಕೆಯು ಅತ್ಯಾಕರ್ಷಕವಾಗಿ ಪ್ರಕಟಗೊಳ್ಳಲು ಕಾರಣರಾದ ಎಲ್ಲರಿಗೂ ಅಭಿನಂದಿಸುತ್ತಾ ಹಾಗೂ ಮಂಡಳಿಯ ಚಟುವಟಿಕೆಗಳಿಗೆ ಯಾವಾಗಲೂ ಯಶಸ್ಸನ್ನು ಕೋರುತ್ತೇನೆ.

ನಿಮ್ಮೆಲ್ಲರ ಸಹಕಾರ ಮತ್ತು ಪ್ರತಿಕ್ರಿಯೆಗಳನ್ನು ನಾವು ಎದುರು ನೋಡುತ್ತಿದ್ದೇವೆ.

**–ಎಸ್. ಪಿ. ಶೇಷಾದ್ರಿ,** ಅಧ್ಯಕ್ಷರು



**ಕರ್ನಾಟಕ ಜೀವವೈವಿಧ್ಯ ಮಂಡಳಿಯಲ್ಲಿ ಉಪ ಅರಣ್ಯ ಸಂರಕ್ಷಣ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ ಎನ್. ಶಾಂತಕುಮಾರ್ ಅವರು ಜೂನ್ 30, 2019 ರಂದು ಸೇವೆಯಿಂದ ನಿವೃತ್ತಿ ಹೊಂದಿದರು.**

### ಸದಸ್ಯ ಕಾರ್ಯದರ್ಶಿಗಳ ಸಂದೇಶ



ಕರ್ನಾಟಕ ಜೀವವೈವಿಧ್ಯ ಮಂಡಳಿ, ಬೆಂಗಳೂರು ತ್ರೈಮಾಸಿಕ ವಾರ್ತಾಪತ್ರದ ಎರಡನೆಯ ಸಂಚಿಕೆಯು ಓದುಗರಿಗೆ ತುಂಬು ಹೃದಯದ ಶುಭಾಶಯಗಳನ್ನು ಕೋರುತ್ತೇನೆ.

ಮಂಡಳಿಯು ಜೈವಿಕ ವೈವಿಧ್ಯ ಅಧಿನಿಯಮ, 2002ರ ನಿಬಂಧನೆಗಳನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲು ಬದ್ಧವಾಗಿದೆ. ಈ ನಿಟ್ಟಿನಲ್ಲಿ, ಕಾಯಿದೆಗೆ ಸಂಬಂಧಪಟ್ಟಂತೆ ವಿವಿಧ ವಿಷಯಗಳ ಕುರಿತು ಉನ್ನತ ಮಟ್ಟದ ಸಂವಹನ ಸಭೆ ಹಾಗೂ ಪುನರ್–ಮನನ ಸಭೆಗಳನ್ನು ನಡೆಸಲಾಗುತ್ತಿದೆ. ಅಲ್ಲದೇ, ಎಲ್ಲ ಪರವಾನಗಿ ಇಲಾಖೆಗಳಿಗೆ ಪರವಾನಗಿ ಕಾರ್ಯ ವಿಧಾನಗಳ ಏಕೀಕರಣ ಮತ್ತು ಸಮನ್ವಯತೆಗಾಗಿ ಮಂಡಳಿಯ ವಿವಿಧ ವಿಭಾಗಗಳ ತಜ್ಞರ ಸಮಿತಿಗಳ ಸಭೆಗಳನ್ನು ಯಶಸ್ವಿಯಾಗಿ ನಡೆಸಲಾಯಿತು.

ಮಂಡಳಿಯಿಂದ ಜೀವವೈವಿಧ್ಯತೆ ಸಂರಕ್ಷಣೆ ಮತ್ತು ಅದರ ಸುಸ್ಥಿರ ಬಳಕೆಗಾಗಿ ರಾಜ್ಯದ ಪ್ರತಿಯೊಂದು ಸ್ಥಳೀಯ ಮಟ್ಟದಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆಯ ಕಾರ್ಯಚಟುವಟಿಕೆಗಳು, ಜನತಾ ಜೀವವೈವಿಧ್ಯ ದಾಖಲಾತಿಗಳು ಪ್ರಗತಿ ಹಂತದಲ್ಲಿವೆ. ಅಲ್ಲದೇ, ಮಂಡಳಿಯು ರಾಜ್ಯದಲ್ಲಿ ಜೀವವೈವಿಧ್ಯತೆ ಸಂರಕ್ಷಣೆಗೆ ಸಂಬಂಧಪಟ್ಟ ಸಂಶೋಧನಾ ಯೋಜನೆಗಳಿಗೆ ಅರ್ಜಿಗಳನ್ನು ಕರೆಯಲಾಗಿ ಆಯ್ಕೆಯು ಪರಿಶೀಲನೆಯಲ್ಲಿರುತ್ತದೆ.

ಮಂಡಳಿಯು 2019ನೇ ಸಾಲಿನ ‘ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ’ಯ ಕಾರ್ಯಕ್ರಮವನ್ನು ‘ನಮ್ಮ ಜೀವವೈವಿಧ್ಯತೆ, ನಮ್ಮ ಆಹಾರ, ನಮ್ಮ ಆರೋಗ್ಯ’ ಎಂಬ ಘೋಷವಾಕ್ಯದೊಂದಿಗೆ ಶ್ರೀಮತಿ ಸಾಲುಮರದ ತಿಮ್ಮಕ್ಕನವರಿಂದ ಉದ್ಘಾಟನೆಗೊಳಿಸಿ ಅವರಿಗೆ ವಿಶೇಷ ಜೀವವೈವಿಧ್ಯ ಪ್ರಶಸ್ತಿಯನ್ನು ಪ್ರಧಾನ ಮಾಡಿ ಗೌರವಿಸುವುದರೊಂದಿಗೆ ಯಶಸ್ವಿಯಾಗಿ ನಡೆಸಲಾಯಿತು.

ಜನಸಾಮಾನ್ಯರಲ್ಲಿ ಜೀವವೈವಿಧ್ಯದ ಸಂರಕ್ಷಣೆ ಮೂಡಿಸುವ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

**– ಡಾ.ವೀರೇಂದ್ರ ಸಿಂಗ್**
ಸದಸ್ಯ ಕಾರ್ಯದರ್ಶಿ

**2011 – 2020**
**ಜೀವವೈವಿಧ್ಯತೆಯ ದಶಕ**
**– ವಿಶ್ವಸಂಸ್ಥೆಯ ಘೋಷಣೆ**

## ಸಂಪಾದಕೀಯ



ಜೀವವೈವಿಧ್ಯ ವಾರ್ತಾಪತ್ರದ ಎರಡನೇ ಸಂಚಿಕೆಯನ್ನು ತಮ್ಮ ಮುಂದಿಡುತ್ತಿದ್ದೇವೆ. ಈ ಸಂಚಿಕೆಯಲ್ಲಿ ಗಮನ ಸೆಳೆಯಬಹುದಾದ ಪಾರಂಪರಿಕ ಜೀವವೈವಿಧ್ಯ ತಾಣವಾದ ಗಾಂಧಿ ಕೃಷಿ ವಿಜ್ಞಾನಕೇಂದ್ರ ಕುರಿತ ಮಾಹಿತಿಯಿದೆ. ಜೀವವೈವಿಧ್ಯಕಾಯ್ದೆ, ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಲಾಭ ಹಂಚಿಕೆ ಹಾಗೂ ಕಾರ್ಟಜೀನ ಮತ್ತು ನಗೋಯಾ ಶಿಷ್ಟಾಚಾರಗಳ ವಿವರಗಳಿವೆ. ಕರ್ನಾಟಕ ಜೀವವೈವಿಧ್ಯ ಮಂಡಲಿಯು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿರುವುದರ ದ್ಯೋತಕವಾಗಿ ತರಬೇತುದಾರರ ತರಬೇತಿ ಕಾರ್ಯಾಗಾರ ಮತ್ತು ಸ್ಯಾಟ್‌ಕಾಮ್ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡ ವಿವರಗಳಿವೆ. ಸಾಂದರ್ಭಿಕ ಚಿತ್ರಗಳಿವೆ. ವಾರ್ತಾಪತ್ರವನ್ನು ಆಕರ್ಷಕವಾಗಿ ರೂಪಿಸಲಾಗಿದೆ. ಅದು ನಿಮ್ಮ ಮನದಲ್ಲಿ ಹಸಿರ ಪ್ರೀತಿಯನ್ನು ನಳನಳಿಸುವಂತೆ ಮಾಡಿ, ನಮ್ಮ ನಾಡು ಜೈವಿಕ ವೈವಿಧ್ಯತೆಗಳ ಸಂರಕ್ಷಣೆಯಿಂದ ಕಂಗೊಳಿಸುವಂತಾಗಲಿ ಎಂಬ ಆಶಯ ನಮ್ಮೆಲ್ಲರದ್ದು.

– ಪ್ರೊ. ಎಂ. ನಾರಾಯಣ ಸ್ವಾಮಿ

## ಅಬುಟಿಲಾನ್ ಇಂಡಿಕಮ್ (*Abutilon indicum*) ಎಂಬ ಹಿತ್ತಿಲ ಗಿಡದ ಮದ್ದು

ಹಿತ್ತಿಲು, ಬಯಲು, ತಿಪ್ಪೆ, ಬೇಲಿ ಮರೆಗಳಲ್ಲಿ ತಂತಾನೆ ಬೆಳೆಯುವ ಗಿಡ ಅಬುಟಿಲಾನ್ ಇಂಡಿಕಮ್. ದಟ್ಟ ಹಳದಿ ಹೂಗಳು, ಮೋಟಾರಿನ "ಗಿಯರ್" ಆಕಾರದ ಹಸಿರು ಕಾಯಿಗಳು ಈ ಗಿಡವನ್ನು ಗುರುತಿಸಲು ಸಹಕಾರಿ. ಮೂರರಿಂದ ನಾಲ್ಕು ಅಡಿ ಎತ್ತರಕ್ಕೆ ಬೆಳೆಯುವ ಗಿಡ. ಅದರ ಬಲಿತ ಎಲೆಗಳು ಸ್ವಲ್ಪದಪ್ಪ, ಹತ್ತಿಬಟ್ಟೆಯ ಸ್ಪರ್ಶಕ್ಕೆ ಹೋಲಿಕೆ ಇವೆ. ಎಲೆ ಮತ್ತು ಕಾಂಡಗಳ ಮೇಲೆ ತುಂಬಾ ನವಿರಾದ ರೋಮಗಳನ್ನು ಹೊಂದಿರುತ್ತವೆ. ಅಜೀರ್ಣವಾದಾಗ, ಬೇದಿಯಾದಾಗ ಈ ಗಿಡದ ಎಲೆಗಳನ್ನು ರೈತರು ತಮ್ಮ ಜಾನುವಾರುಗಳಿಗೆ ತಿನ್ನಿಸುತ್ತಾರೆ.



ಇಂಗ್ಲೀಷಿನ ಹೆಸರು ಕಂಟ್ರಿಮ್ಯಾಲೋ. ಅತಿಬಾಲ ಎಂದು ಆಯುರ್ವೇದದಲ್ಲಿ ಕರೆಯಲಾಗುತ್ತದೆ. ಕನ್ನಡದಲ್ಲಿ ತುರಬೆ, ತುರಬಿ ಗಿಡ, ಹಾಗಡೆ, ಮುದ್ರೆಗಿಡ, ಶ್ರೀಮುದ್ರೆ ಗಿಡ ಎಂಬೆಲ್ಲಾ ಹೆಸರುಗಳೂ ಇವೆ. ಉಷ್ಣವಲಯ, ಸಮಶೀತೋಷ್ಣವಲಯದ ದಟ್ಟವಾದ ಬಿಸಿಲು ಇರುವ ಕಡೆ ಧಾರಾಳವಾಗಿ ಬೆಳೆಯುತ್ತದೆ. ಕಾರ್ಲ್ ಲಿನೆಯಾಸ್ ಇದನ್ನು ಹೆಸರಿಸಲು ಮೂಲತಃ ಭಾರತೀಯ ಗಿಡವನ್ನೇ ಬಳಸಿದ್ದಿರಬೇಕು, ಹಾಗಾಗಿ ಇದಕ್ಕೆ ಅಬುಟಿಲಾನ್ ಇಂಡಿಕಂ (*Abutilon indicum*) ಎಂದೇ ಕರೆದಿದ್ದಾರೆ. ಇದು ಹತ್ತಿ ಗಿಡದ ಸಂಬಂಧಿ, ಅದೇ ಕುಟುಂಬಕ್ಕೇ ಸೇರಿದ ಗಿಡ. ಮಾಲ್ವೇಸಿಯೆ ಸಸ್ಯ ಕುಟುಂಬದ ಗಿಡ. ಇದೇ ಕುಟುಂಬಕ್ಕೆ ನಾವು ತಿನ್ನುವ ತರಕಾರಿ ಬೆಂಡೆಕಾಯಿ ಕೂಡ ಸೇರಿದೆ.

ಸುಮಾರು 15 ವರ್ಷಗಳ ಹಿಂದೆ ಹರಪನಹಳ್ಳಿಯ ಔಷಧ ವಿಜ್ಞಾನ ಕಾಲೇಜಿನ ಪ್ರಯೋಗಾಲಯದಲ್ಲಿ ಇಲಿಗಳನ್ನು ಬಳಸಿ ಅಬುಟಿಲಾನ್‌ನಿಂದ ತಯಾರಿಸಿದ ವಿವಿಧ ಔಷಧಗಳನ್ನು ಪ್ರಯೋಗಕ್ಕೆ ಒಡ್ಡಲಾಯಿತು. ಇಲಿಗಳಿಗೆ ಹರಳೆಣ್ಣೆ ಕುಡಿಸಿ, ಭೇದಿ ತರಲು ಪ್ರಯತ್ನಿಸಿ, ಔಷಧವು ಹೊಟ್ಟೆ ಮತ್ತು ಕರುಳಿನಲ್ಲಿ ಉಂಟು ಮಾಡುವ ರಾಸಾಯನಿಕ ಬದಲಾವಣೆ ಮತ್ತು ಆಹಾರದ ಚಲನೆಯನ್ನು ಸಮೀಕರಿಸಿ ಅಬುಟಿಲಾನ್ ಔಷಧೀಯ ಪ್ರಕ್ರಿಯೆಯನ್ನು ವಿವರವಾಗಿ ಒಟ್ಟು ಮಾಡಿ ನ್ಯಾಚುರಲ್ ರೆಮಿಡೀಸ್ ವಿಜ್ಞಾನ ಪತ್ರಿಕೆ (Journal of Natural Remedies) ಯಲ್ಲಿ ಸಂಶೋಧನಾ ಲೇಖನವನ್ನು ಪ್ರಕಟಿಸಲಾಗಿದೆ. ಸುಮಾರು 50ಕ್ಕೂ ಹೆಚ್ಚು ಬಾರಿ ಜಗತ್ತಿನ ಅನೇಕ ಸಂಶೋಧಕರು ಈ ಲೇಖನವನ್ನು ಆಕರವಾಗಿ ಬಳಸಿದ್ದಾರೆ.

ಆಯುರ್ವೇದ ಹಾಗೂ ಸಿದ್ಧ ಔಷಧ ಪದ್ಧತಿಗಳೆರಡರಲ್ಲೂ ಇದರ ಬಳಕೆಯು ದಾಖಲಾಗಿದೆ. ಹತ್ತಾರು ಕಾಯಿಲೆಗಳಿಗೆ ಉಪಶಮನಕಾರಿ ಎಂಬ ಮಾಹಿತಿಯಿದೆ. ಶ್ರೀಮುದ್ರೆ ಗಿಡವನ್ನು ಅನೇಕ ರಾಷ್ಟ್ರಗಳಲ್ಲಿ ಹೆಚ್ಚಾಗಿ ಕಾಣುವ ಬಗ್ಗೆ ಇಂಗ್ಲೆಂಡಿನ ಅಂತರರಾಷ್ಟ್ರೀಯ ಕೃಷಿ ಮತ್ತು ಜೈವಿಕ ವಿಜ್ಞಾನ ಕೇಂದ್ರವು (Centre for Agriculture and Bioscience International - CABI) ನಕ್ಷೆಯನ್ನು ಸಿದ್ಧಪಡಿಸಿದೆ. ಇದು ಜಗದ್ವ್ಯಾಪಿ ಗಿಡವಾಗಿದೆ. ಕಾಯಿಗಳು ಒಣಗಿದಾಗ ಸಿಡಿದು ಸಾಕಷ್ಟು ಬೀಜಗಳನ್ನು ಸುತ್ತಲೂ ಬಿತ್ತುವಂತೆ ಹರಡುತ್ತವೆ. ಆದ್ದರಿಂದಲೇ ಇದನ್ನು ಅತಿಕ್ರಮಿಸುವ ಸಸ್ಯಗಳ ಪಟ್ಟಿಯಲ್ಲಿಯೂ ಸೇರಿಸಲಾಗಿದೆ.

ಅಬುಟಿಲಾನ್ ಗಿಡದ ಅನೇಕ ಭಾಗಗಳು ಔಷಧ ಗುಣವನ್ನು ಹೊಂದಿವೆ. ಎಲೆ, ಕಾಂಡ, ತೊಗಟೆ, ಹೂವು, ಬೀಜ ಹೀಗೆ ಪ್ರತ್ಯೇಕವಾಗಿ ಅವುಗಳಿಂದ ಹಲವು ಕಷಾಯಗಳನ್ನು ತಯಾರಿಸಿ ವಿವಿಧ ಔಷಧೀಯ ಗುಣಗಳನ್ನು ಅರಿಯುವ ಪ್ರಯತ್ನಗಳಾಗಿವೆ. ಈ ಸಸ್ಯದಲ್ಲಿ ಹೊಸ ರಾಸಾಯನಿಕಗಳ ಪತ್ತೆ ಹಚ್ಚುವ ಪ್ರಯತ್ನವೂ ನಡೆದಿದೆ. ಭೇದಿ ನಿವಾರಣೆ, ಸಕ್ಕರೆ ಅಂಶದ ಹತೋಟಿ, ಹಲವು ಬ್ಯಾಕ್ಟೀರಿಯಾ ಹಾಗೂ ಶಿಲೀಂಧ್ರಗಳ ನಿಯಂತ್ರಣ, ಜೀರ್ಣಾಂಗಗಳ ಸಮಸ್ಯೆಗೆ, ಉರಿಯೂತಕ್ಕೆ, ಗಾಯ ಮಾಗಲು, ರಕ್ತ ಶುದ್ಧಿಕರಣಕ್ಕೆ, ಅಲರ್ಜಿ, ಹೊಟ್ಟೆ ನೋವಿಗೆ ಹಾಗೂ ನರಗಳಿಗೆ ಸಂಬಂಧಿಸಿದ ಕಾಯಿಲೆಗಳಿಗೆ ಔಷಧಿಯಾಗಿ ಬಳಸುವ ಕುರಿತು ಸಂಶೋಧನಾ ವರದಿಗಳಿವೆ.

– ಡಾ. ಟಿ.ಎಸ್. ಚನ್ನೇಶ್
ನಿರ್ದೇಶಕರು, ಸೆಂಟರ್ ಫಾರ್ ಪಬ್ಲಿಕ್ ಅಂಡರ್ ಸ್ಟ್ಯಾಂಡಿಂಗ್ ಆಫ್ ಸೈನ್ಸ್, ಬೆಂಗಳೂರು– 560 097

# ಜೀವವೈವಿಧ್ಯ ನಿರ್ವಹಣಾ ಸಮಿತಿ, ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆ ಮತ್ತು ತರಬೇತಿ ಕಾರ್ಯಾಗಾರದ ವರದಿ

**1. ಜೀವವೈವಿಧ್ಯ ನಿರ್ವಹಣಾ ಸಮಿತಿ ರಚನೆಯ ಪ್ರಗತಿ**

| | |
|---|---|
| ಜಿಲ್ಲೆ | 15 |
| ತಾಲ್ಲೂಕು | 150 |
| ಗ್ರಾಮಪಂಚಾಯಿತಿ | 5441 |
| ಒಟ್ಟು | 5606 |

**2. ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಯ ಪ್ರಗತಿ**

| | |
|---|---|
| ಜಿಲ್ಲೆ | 05 |
| ತಾಲ್ಲೂಕು | 24 |
| ಗ್ರಾಮಪಂಚಾಯಿತಿ | 1958 |
| ಒಟ್ಟು | 1987 |

**3. ತರಬೇತುದಾರರ ತರಬೇತಿ ಕಾರ್ಯಾಗಾರ :**

ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ಕಾರ್ಯಪ್ರವೃತ್ತಿಗೊಳಿಸಲು ರಾಜ್ಯದ 30 ಜಿಲ್ಲೆಗಳನ್ನೊಳಗೊಂಡಂತೆ ಒಟ್ಟು 8 ವೃತ್ತಗಳಲ್ಲಿ (ಬೆಂಗಳೂರು ನಗರ, ಧಾರವಾಡ, ಬಳ್ಳಾರಿ, ಹಾಸನ, ಮೈಸೂರು, ಕಲಬುರಗಿ, ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ) ತರಬೇತುದಾರರ ತರಬೇತಿ ಕಾರ್ಯಾಗಾರವನ್ನು ನೋಡಲ್ ಅಧಿಕಾರಿಗಳಾದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಸಾಮಾಜಿಕ ಅರಣ್ಯ) ರವರ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಯಿತು. ಸದರಿ ಕಾರ್ಯಾಗಾರದಂದು ಜೀವವೈವಿಧ್ಯತೆ ಸಂರಕ್ಷಣೆ, ಸುಸ್ಥಿರ ಬಳಕೆ, ಜೈವಿಕ ಸಂಪನ್ಮೂಲಗಳ ಲಾಭ ಮತ್ತು ನ್ಯಾಯಸಮ್ಮತ ಹಂಚಿಕೆ, ಜೀವವೈವಿಧ್ಯ ನಿರ್ವಹಣಾ ಸಮಿತಿಯ ರಚನೆ, ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆ ಹಾಗೂ ಪಾರಂಪರಿಕ ಅಥವಾ ಸಾಂಪ್ರದಾಯಿಕ ಜ್ಞಾನಗಳ ಕುರಿತು ಪಿಪಿಟಿ ಪ್ರಸ್ತುತಿ ಮೂಲಕ ಮಾಹಿತಿ ನೀಡಲಾಯಿತು. ತರಬೇತುದಾರರಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು ಹಾಗೂ ತರಬೇತುದಾರರನ್ನು ಸಂಪನ್ಮೂಲ ವ್ಯಕ್ತಿಗಳನ್ನಾಗಿ ಆಯ್ಕೆ ಮಾಡಲಾಯಿತು.



**4. ಸ್ಯಾಟ್‌ಕಾಮ್‌ತರಬೇತಿಕಾರ್ಯಕ್ರಮ:**

ಕರ್ನಾಟಕ ಜೀವವೈವಿಧ್ಯ ಮಂಡಳಿಯು ರಾಜ್ಯದ ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿಗಳ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ಕಾರ್ಯಪ್ರವೃತ್ತಿಗೊಳಿಸಲು, ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಂಸ್ಥೆ, ಮೈಸೂರು ಮುಖಾಂತರ ಸ್ಯಾಟ್‌ಕಾಮ್ (SATCOM) ತರಬೇತಿ ಕಾರ್ಯಕ್ರಮವನ್ನು ದಿನಾಂಕ: 20–06–2019ರಂದು ಆಯೋಜಿಸಲಾಯಿತು. ಸದರಿ ತರಬೇತಿ ಕಾರ್ಯಕ್ರಮವನ್ನು 139 ತಾಲ್ಲೂಕುಗಳಲ್ಲಿ ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿಗಳ ಜೀವವೈವಿಧ್ಯ ನಿರ್ವಹಣಾ ಸಮಿತಿಯ ಸದಸ್ಯರುಗಳಿಗೆ, ಚುನಾಯಿತ ಅಧಿಕಾರಿಗಳಿಗೆ, ನಾಟಿ ವೈದ್ಯರುಗಳಿಗೆ ಮತ್ತು ಇಲಾಖಾ ಅಧಿಕಾರಿಗಳಿಗೆ ಹಮ್ಮಿಕೊಳ್ಳಲಾಯಿತು.



ತರಬೇತುದಾರರ ತರಬೇತಿ ಕಾರ್ಯಕ್ರಮದಲ್ಲಿ ತರಬೇತುದಾರರಾಗಿ ಭಾಗವಹಿಸಿದ್ದವರನ್ನು ಸಂಪನ್ಮೂಲ ವ್ಯಕ್ತಿಗಳನ್ನಾಗಿ ಆಯ್ಕೆ ಮಾಡಿ ಸದರಿ ತಾಲ್ಲೂಕುಗಳಲ್ಲಿ ಹಾಜರಾಗಲು ತಿಳಿಸಲಾಗಿತ್ತು.

ತರಬೇತಿಗೆ ಹಾಜರಾದವರಿಗೆ ಜೀವವೈವಿಧ್ಯ ನಿರ್ವಹಣಾ ಸಮಿತಿಯ ಕೈಪಿಡಿಗಳನ್ನು ನೀಡಲಾಯಿತು ಮತ್ತು ಜೀವವೈವಿಧ್ಯ ನಿರ್ವಹಣಾ ಸಮಿತಿಯ ಕಿರುಚಿತ್ರವನ್ನು ಪ್ರದರ್ಶಿಸಲಾಯಿತು. ಪಿಪಿಟಿ ಪ್ರಸ್ತುತಿ (Power Point Presentation) ಮೂಲಕ ಜೀವವೈವಿಧ್ಯತೆ ಅದರ ಸಂರಕ್ಷಣೆ, ಜೀವವೈವಿಧ್ಯ ನಿರ್ವಹಣಾ ಸಮಿತಿ ರಚನೆ ಮತ್ತು ಕಾರ್ಯಚಟುವಟಿಕೆ, ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆ ಮತ್ತು ಜೈವಿಕ ಸಂಪನ್ಮೂಲಗಳ ಲಾಭ ಮತ್ತು ನ್ಯಾಯಸಮ್ಮತ ಹಂಚಿಕೆಯ ಕುರಿತು ವಿವರಣೆ ನೀಡಲಾಯಿತು.


ಸ್ಯಾಟ್‌ಕಾಮ್ ತರಬೇತಿ ಕಾರ್ಯಕ್ರಮಕ್ಕೆ ಮಂಡಳಿಯ ಅಧ್ಯಕ್ಷರಾದ ಎಸ್. ಪಿ. ಶೇಷಾದ್ರಿ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ಶಾಂತಕುಮಾರ್ ಎನ್, ಎಬಿಎಸ್ ಸಮಾಲೋಚಕರಾದ ಶ್ರೀಮತಿ. ವೀಣಾ ಪಿ.ಜಿ, ಮತ್ತು ಜನತಾ ಜೀವವೈವಿಧ್ಯ ದಾಖಲಾತಿ ಸಮಾಲೋಚಕರಾದ ಶ್ರೀಮತಿ. ಐಶ್ವರ್ಯ ಬಿ.ಎನ್, ತಾಂತ್ರಿಕ ಕಾರ್ಯನಿರ್ವಾಹಕರಾದ ಪ್ರಸನ್ನ ಕೆ. ಆರ್. ಮತ್ತು ಫರ್ಹೀನ್ ನಾಜ್‌ರವರು ಹಾಜರಿದ್ದರು. ಡಾ. ಉಮೇಶ್‌ರವರು ಕಾರ್ಯಕ್ರಮದ ನಿರೂಪಣೆ ಮಾಡಿದರು. ಸಾರ್ವಜನಿಕರು ಪ್ರಶ್ನಾವಳಿಯ ಸಮಯದಲ್ಲಿ ಕೇಳಲಾದ ಪ್ರಶ್ನೆಗಳಿಗೆ ಮಂಡಳಿಯ ಅಧ್ಯಕ್ಷರು ಮತ್ತು ಸಮಾಲೋಚಕರು ಪ್ರತಿಕ್ರಿಯಿಸಿದರು.

# ಜೈವಿಕ ವೈವಿಧ್ಯ ಕುರಿತ ಒಡಂಬಡಿಕೆಯ (ಸಿಬಿಡಿ) ಎರಡು ಪೂರಕ ಒಪ್ಪಂದಗಳು

– **ವೀಣಾ ಪಿ. ಜಿ.,** ಎಬಿಎಸ್ ಸಮಾಲೋಚಕರು ಮತ್ತು **ವಿಜಯಲಕ್ಷ್ಮಿ ಬಿ. ಹೆಚ್.** ತಾಂತ್ರಿಕ ಸಹಾಯಕರು (ಎಬಿಎಸ್)

ಬ್ರೆಜಿಲ್‌ನ ರಿಯೋ ಡಿ ಜನ್ವೆರೊದಲ್ಲಿ 1992ರಲ್ಲಿ ಜಾಗತಿಕ ಜೀವವೈವಿಧ್ಯ ಸಮಾವೇಷ ಜರುಗಿದ ನಂತರ ಕೆಲವು ಶಿಷ್ಟಾಚಾರ ನಿಯಮಾವಳಿಗನ್ನು ರೂಪಿಸಲು ಮತ್ತೆರಡು ಪ್ರಮುಖ ಸಮಾವೇಷಗಳನ್ನು ಕಾರ್ಟಜೀನ ಮತ್ತು ನಗೋಯಾದಲ್ಲಿ ನಡೆಸಲಾಯಿತು. ಅವುಗಳ ಉದ್ದೇಶಗಳ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.


## 1. ಜೈವಿಕ ಸುರಕ್ಷತೆಯ ಮೇಲಿನ ಕಾರ್ಟಜೀನ ಶಿಷ್ಟಾಚಾರ (Cartagena Protocol):




ಈ ಶಿಷ್ಟಾಚಾರವನ್ನು ಕೊಲಂಬಿಯಾದ ಕಾರ್ಟಜೀನದಲ್ಲಿ 2000ನೇ ಜನವರಿ ತಿಂಗಳಿನಲ್ಲಿ ಅಳವಡಿಸಿಕೊಳ್ಳಲಾಯಿತು ಮತ್ತು ಭಾರತದಲ್ಲಿ 2003ನೇ ಸೆಪ್ಟೆಂಬರ್ ತಿಂಗಳಲ್ಲಿ ಜಾರಿಗೆ ತರಲಾಯಿತು.

ಜೈವಿಕ ತಂತ್ರಜ್ಞಾನದ (Biotechnology) ಮೂಲಕ ಸೃಷ್ಟಿಸಲಾದ ಮಾರ್ಪಡಿಸಿದ ಸೂಕ್ಷ್ಮಜೀವಿ (Live Micro-Organisms : LMO) ಗಳನ್ನು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಸಾಗಿಸುವುದನ್ನು ನಿಯಂತ್ರಿಸುತ್ತದೆ. ಪ್ರತಿ ದೇಶವೂ ಜೈವಿಕ ಸಂರಕ್ಷಣೆ ಪರವಾನಗಿ ಗೃಹ (Bio-safety Clearing House) ಗಳನ್ನು ಸ್ಥಾಪಿಸಬೇಕು.

## 2. ಬಳಕೆ ಮತ್ತು ಲಾಭ ಹಂಚಿಕೆಯ ಕುರಿತ ನಗೋಯಾ ಶಿಷ್ಟಾಚಾರ (Nagoya Protocol on ABS)




ಈ ಶಿಷ್ಟಾಚಾರವನ್ನು ಜಪಾನ್‌ನ ನಗೋಯಾದಲ್ಲಿ 29ನೇ ಅಕ್ಟೋಬರ್, 2010ರಂದು 10ನೇ ಸಮಾವೇಶದಲ್ಲಿ ಸಿಬಿಡಿಗೆ ಅಳವಡಿಸಲಾಯಿತು. ಪಕ್ಷಗಳು 'ABS Clearing House' ಮತ್ತು ಅದರ ನಿಯಂತ್ರಣಗಳನ್ನು ಸ್ಥಾಪಿಸಬೇಕಾಗಿರುತ್ತದೆ.

ಭಾರತವು ಮೇ 2011ರಲ್ಲಿ ಈ ಶಿಷ್ಟಾಚಾರದ ಒಪ್ಪಂದ ಮಾಡಿಕೊಂಡು ದಿನಾಂಕ 21ನೇ ನವೆಂಬರ್, 2014ರಂದು ಪರಿಸರ, ಅರಣ್ಯ ಮತ್ತು ಹವಾಮಾನ ವೈಪರೀತ್ಯ ಮಂತ್ರಾಲಯವು (MoEFCC) ಅಧಿಸೂಚಿಸಿದ ಎಬಿಎಸ್ ವಿನಿಯಮಗಳು, 2014ರ ಪ್ರಕಾರ ಬಳಕೆ ಮತ್ತು ಲಾಭ ಹಂಚಿಕೆ (ಎಬಿಎಸ್)ಗಳ ಬಾಧ್ಯತೆಗಳನ್ನು ಜಾರಿಗೆ ತಂದಿತು.

**ಕರ್ನಾಟಕ ಜೈವಿಕ ವೈವಿಧ್ಯ ಅಧಿನಿಯಮಗಳು 2005 ಕ್ಕೆ ತರಲಾದ ತಿದ್ದುಪಡಿಯು ಮೇ 23, 2019ರ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾಗಿದೆ. ಅದರಂತೆ, ನಿಯಮ 15 (1ಎ) ಉಪನಿಯಮ 1 ರ ಪ್ರಕಾರ ಜೈವಿಕ ಸಂಪನ್ಮೂಲಗಳ ವಾಣಿಜ್ಯ ಬಳಕೆಗೆ ಅರ್ಜಿ ಸಲ್ಲಿಸುವಾಗ ಒಂದು ಸಾವಿರ ರೂ.ಗಳ ಶುಲ್ಕವನ್ನು ಸಂದಾಯ ಮಾಡಬೇಕಿರುತ್ತದೆ. ವಿವರಗಳಿಗೆ ಅಧಿಸೂಚನೆಯ ಪ್ರತಿ ನೋಡಿರಿ.**

**ಭಾಗ ೪ಎ** **ಕರ್ನಾಟಕ ರಾಜ್ಯಪತ್ರ, ಗುರುವಾರ, ಮೇ ೨೩, ೨೦೧೯** ೧೯೧೭

**ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಅಪಜೀ 24 ಇಎನ್‌ವಿ 2018, ಬೆಂಗಳೂರು, ದಿನಾಂಕ: 28–03–2019**

ರಾಜ್ಯ ಸರ್ಕಾರಕ್ಕೆ ಪ್ರದತ್ತವಾಗಿರುವ ಜೈವಿಕ ವೈವಿಧ್ಯ ಅಧಿನಿಯಮ, 2002ರ (2003ರ 18 ಕೇಂದ್ರೀಯ ಶಾಸನ) ಸೆಕ್ಷನ್ 63ರಲ್ಲಿನ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಜೈವಿಕ ವೈವಿಧ್ಯ ನಿಯಮಗಳು, 2005ಕ್ಕೆ ತಿದ್ದುಪಡಿ ತರಲು ಈ ಕೆಳಕಂಡ ನಿಯಮಗಳನ್ನು ರಚಿಸಿದೆ. ಅವುಗಳೆಂದರೆ.

**ನಿಯಮಗಳು**

1. **ಹೆಸರು ಮತ್ತು ಪ್ರಾರಂಭ: (1)** ಈ ನಿಯಮಗಳಲ್ಲಿ ಕರ್ನಾಟಕ ಜೈವಿಕ ವೈವಿಧ್ಯ (ತಿದ್ದುಪಡಿ) ನಿಯಮಗಳು, 2019 ಎಂದು ಕರೆಯತಕ್ಕದ್ದು.

   **(2)** ಈ ನಿಯಮಗಳು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ನಿಯಮ 15 ಕ್ಕೆ ತಿದ್ದುಪಡಿ:** ಕರ್ನಾಟಕ ಜೈವಿಕ ವೈವಿಧ್ಯ ನಿಯಮಗಳು, 2005 ರ ನಿಯಮ 15ರಲ್ಲಿ, ಉಪ ನಿಯಮ (1)ರ ನಂತರ ಈ ಕೆಳಗಿನಂತೆ ಸೇರಿಸಿ ಓದಿಕೊಳ್ಳತಕ್ಕದ್ದು.:–

   "(1ಎ) ಉಪನಿಯಮ (1) ರಡಿಯಲ್ಲಿ ವಾಣಿಜ್ಯ ಬಳಕೆಗಾಗಿ ಸಲ್ಲಿಸಲಾದ ಪ್ರತಿಯೊಂದು ಅರ್ಜಿಯ ಜೊತೆಗೆ ಒಂದು ಸಾವಿರ ರೂಪಾಯಿಗಳ ಶುಲ್ಕವನ್ನು ಇರಿಸತಕ್ಕದ್ದು ಹಾಗೂ ಸದರಿ ಶುಲ್ಕವನ್ನು ಚೆಕ್ಕು ಅಥವಾ ಡಿಮಾಂಡ್ ಡ್ರಾಫ್ಟ್ ರೂಪದಲ್ಲಿ ಮಂಡಳಿಯ ಹೆಸರಿಗೆ ಇರತಕ್ಕದ್ದು, ಸಲ್ಲಿಸಲಾದ ಅರ್ಜಿ ತಿರಸ್ಕೃತಗೊಂಡಲ್ಲಿ ಪಾವತಿಸಿದ ಶುಲ್ಕದ ಐದನೇ ನಾಲ್ಕು ಭಾಗವನ್ನು ಅರ್ಜಿದಾರರಿಗೆ ಮರುಪಾವತಿಸತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಬಾಲಚಂದಿರಾಮ. ಗೋ. ಹುಣಶಾಳ**

ಸರ್ಕಾರದ ಅಧೀನ ಕಾರ್ಯದರ್ಶಿ

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

# ಜೈವಿಕ ವೈವಿಧ್ಯ ಅಧಿನಿಯಮ, 2002 ಮತ್ತು ಎಬಿಎಸ್ ನಿಯಮಗಳು, 2014ರ ಪ್ರಶ್ನೋತ್ತರಗಳು

**1. ಜೈವಿಕ ಸಂಪನ್ಮೂಲಗಳು ಎಂದರೇನು?**


"ಜೈವಿಕ ಸಂಪನ್ಮೂಲಗಳು" ಎಂದರೆ ಸಸ್ಯಗಳು, ಪ್ರಾಣಿಗಳು ಮತ್ತು ಸೂಕ್ಷ್ಮಾಣು ಜೀವಿಗಳು ಅಥವಾ ಅವುಗಳ ಭಾಗಗಳು, ಅವುಗಳ ಜೀವೋತ್ಪತ್ತಿ ವಸ್ತುಗಳು ಮತ್ತು ವಾಸ್ತವವಾದ ಅಥವಾ ಸಂಭಾವ್ಯ ಉಪಯೋಗವುಳ್ಳ ಅಥವಾ ಮೌಲ್ಯವುಳ್ಳ ಉಪ ಉತ್ಪನ್ನಗಳು ಎಂದು ಅರ್ಥ (ಮೌಲ್ಯವರ್ಧಿತ ಉತ್ಪನ್ನಗಳನ್ನು ಹೊರತುಪಡಿಸಿ), ಆದರೆ ಇದು ಮಾನವ ಜೀವೋತ್ಪತ್ತಿ ವಸ್ತುಗಳನ್ನು ಒಳಗೊಳ್ಳುವುದಿಲ್ಲ.

**2. ವಾಣಿಜ್ಯ ಬಳಕೆ ಎಂದರೇನು?**

"ವಾಣಿಜ್ಯ ಬಳಕೆ" ಎಂದರೆ, ಔಷಧಗಳು, ಕೈಗಾರಿಕಾ ಕಿಣ್ವಗಳು, ಆಹಾರ ರುಚಿಕಾರಕಗಳು, ಪರಿಮಳಗಳು, ಪ್ರಸಾಧನಗಳು, ಹಾಲಂಧಕಗಳು, ತೈಲರಾಳಗಳು, ಬಣ್ಣಗಳು, ಸಾರಗಳು ಮತ್ತು ತಳಿ ಸಂಕರಣದ ಮೂಲಕ ಬೆಳೆಗಳನ್ನು ಮತ್ತು ಜಾನುವಾರುಗಳನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಬಳಸಿದ ತಳಿಗಳಂತಹ ವಾಣಿಜ್ಯ ಬಳಕೆಗಾಗಿ ಜೈವಿಕ ಸಂಪನ್ಮೂಲಗಳ ಅಂತಿಮ ಬಳಕೆ ಎಂದು ಅರ್ಥ. ಆದರೆ ಇದು ಕೃಷಿ, ತೋಟಗಾರಿಕೆ, ಕೋಳಿ ಸಾಕಣೆ, ಹೈನುಗಾರಿಕೆ, ಪಶು ಸಂಗೋಪನೆ, ಅಥವಾ ಜೇನು ಸಾಕಣೆಯಲ್ಲಿ ಬಳಕೆಯಲ್ಲಿರುವ ಸಾಂಪ್ರದಾಯಿಕ ತಳಿ ಅಭಿವೃದ್ಧಿ ಅಥವಾ ರೂಢಿಗತ ಪದ್ಧತಿಗಳನ್ನು ಒಳಗೊಳ್ಳುವುದಿಲ್ಲ.

**3. ಜೈವಿಕ ವೈವಿಧ್ಯಅಧಿನಿಯಮ, 2002ರ ಕಾಯಿದೆ ಹಾಗೂ ನಿಬಂಧನೆಗಳಿಗೆ ಯಾರು ಬದ್ಧರಾಗಿರುತ್ತಾರೆ?**


**ಪರಿಚ್ಛೇದ 3:** ಜೈವಿಕ ಸಂಪನ್ಮೂಲಗಳನ್ನು, ವಾಣಿಜ್ಯಕ ಕಾರಣಗಳಿಗಾಗಿ, ಸಂಶೋಧನೆಗಾಗಿ, ಜೈವಿಕ ಸಮೀಕ್ಷೆ/ ಜೈವಿಕ ಬಳಕೆ ಮತ್ತು ಅಥವಾ ಸಂಬಂಧಿಸಿದ ಜ್ಞಾನಗಳ ಬಳಕೆಯನ್ನು, ವಿದೇಶಿ ಸಹಭಾಗಿತ್ವ ಹೊಂದಿದ ಯಾವುದೇ ವ್ಯಕ್ತಿ ಅಥವಾ ಕಂಪೆನಿ ಬಳಕೆ ಮಾಡುತ್ತಿರುವ ಪಕ್ಷದಲ್ಲಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದಿಂದ ಮುಂಚಿತವಾಗಿ ಕಡ್ಡಾಯವಾಗಿ ಅನುಮತಿ ಪಡೆಯುವುದು.




**ಪರಿಚ್ಛೇದ 7:** ಭಾರತೀಯ ವ್ಯಕ್ತಿ ಅಥವಾ ಕಂಪೆನಿಯು, ಜೈವಿಕ ಸಂಪನ್ಮೂಲಗಳನ್ನು ವಾಣಿಜ್ಯ ಕಾರಣಗಳಿಗಾಗಿ, ಜೈವಿಕ ಸಮೀಕ್ಷೆ / ಜೈವಿಕ ಬಳಕೆ ಮತ್ತು / ಅಥವಾ ಸಂಬಂಧಿತ ಜ್ಞಾನಗಳ ಬಳಕೆ ಮಾಡಲು ಇಚ್ಛಿಸಿದ ಪಕ್ಷದಲ್ಲಿ, ಯಾವ ರಾಜ್ಯದಿಂದ ಜೈವಿಕ ಸಂಪನ್ಮೂಲಗಳನ್ನು ಸಂಗ್ರಹಣೆ ಮಾಡುವ ಉದ್ದೇಶವಿದೆಯೋ, ಅಂತಹ ರಾಜ್ಯ ಜೀವವೈವಿಧ್ಯ ಮಂಡಳಿಗಳಿಂದ ಮುಂಚಿತವಾಗಿ ಅನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಆದರೆ ಸ್ಥಳೀಯ ಜೀವವೈವಿಧ್ಯತೆಯ ಬೆಳೆಗಾರರು ಮತ್ತು ಸ್ಥಳೀಯ ರೈತರು ಮತ್ತು ಸಮುದಾಯ ಹಾಗೂ ದೇಸಿ ಔಷಧೀಯ ಪದ್ಧತಿಯನ್ನು ಅನುಸರಿಸುವ ವೈದ್ಯರು ಮತ್ತು ಹಕೀಮರು, ಇವರಿಗೆ ರಾಜ್ಯ ಜೀವವೈವಿಧ್ಯ ಮಂಡಳಿಯ ನಿಯಂತ್ರಣಾ ಪರಿಧಿಯಿಂದ ವಿನಾಯಿತಿ ಕೊಡಲಾಗಿದೆ.

**4. ಜೈವಿಕ ವೈವಿಧ್ಯ ಅಧಿನಿಯಮ, 2002ರ ಕಾಯಿದೆ ಮತ್ತು ಎಬಿಎಸ್ ರೆಗ್ಯುಲೇಷನ್ಸ್, 2014ರ ಅಡಿಯಲ್ಲಿ ಬರುವ ಬಾಧ್ಯತೆಗಳು ಯಾವುವು?**

ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಲಾಭ ಹಂಚಿಕೆಯ ಪ್ರಕ್ರಿಯೆಯನ್ನು "ಜೈವಿಕ ಸಂಪನ್ಮೂಲಗಳ ಮತ್ತು ಸಂಬಂಧಿತ ಸಾಂಪ್ರದಾಯಿಕ ಜ್ಞಾನವನ್ನು ಪಡೆದುಕೊಳ್ಳುವುದಕ್ಕೆ, ಹಾಗೂ ಲಾಭ ಹಂಚಿಕೆಯ ನಿಯಂತ್ರಣದ ಮಾರ್ಗಸೂಚಿಗಳು 2014" ನ್ನು ನವೆಂಬರ್ 21, 2014 ರಂದು ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಭಾರತ ಗೆಜೆಟ್ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ. ABS ಮಾರ್ಗಸೂಚಿಗಳಲ್ಲಿ (ABS Guidelines, 2014), ವಾಣಿಜ್ಯ ಬಳಕೆಗಾಗಿ ಅಥವಾ ಜೈವಿಕ ಸಮೀಕ್ಷೆಗಾಗಿ ಜೈವಿಕ ಸಂಪನ್ಮೂಲಗಳನ್ನು ಪಡೆಯುವುದಕ್ಕೆ ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಲಾಭ ಹಂಚಿಕೆಯ ವಿಧಾನಗಳನ್ನು ಸೂಚಿಸಲಾಗಿದೆ.




**5. ಜೈವಿಕ ವೈವಿಧ್ಯ ಕಾಯಿದೆ ಹಾಗೂ ಅದರ ನಿಬಂಧನೆಗಳನ್ನು ಅನುಸರಣೆ ಮಾಡದೇ ಹೋದರೆ ಏನಾಗುತ್ತದೆ?**

ಪ್ರಕರಣ 58ರ ಪ್ರಕಾರ ಕಾಯಿದೆಗಳ ನಿಬಂಧನೆಗಳನ್ನು ಅನುಸರಣೆ ಮಾಡದವರಿಗೆ ಉಲ್ಲಂಘಿಸುವ ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು ಹಾಗೂ ಜಾಮೀನೀಯವಲ್ಲದಾಗಿರತಕ್ಕದ್ದು ಮತ್ತು ಕಾಯಿದೆಯ ಪ್ರಕರಣ 55 ಮತ್ತು 56ರ ಪ್ರಕಾರ ಕಾಯಿದೆಯನ್ನು ಉಲ್ಲಂಘಿಸುವ ವ್ಯಕ್ತಿಯು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

– ವೀಣಾ ಪಿ. ಜಿ.
ಎಬಿಎಸ್ ಸಮಾಲೋಚಕರು



ದಿನಾಂಕ 2ನೇ ಏಪ್ರಿಲ್ 2019ರಂದು ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಅಪರ ಕಾರ್ಯದರ್ಶಿಗಳಾದ ಶ್ರೀ. ಅನಿಲ್ ಕುಮಾರ್ ಜೈನ್ ಮತ್ತು ಮಂಡಳಿಯ ಸದಸ್ಯರುಗಳೊಂದಿಗೆ ನಡೆಸಿದ ವಿಚಾರ ವಿನಿಮಯ ಸಭೆಯ ಚಿತ್ರ

ದಿನಾಂಕ 2ನೇ ಮೇ 2019ರಂದು ಹರಿಯಾಣ ಜೀವವೈವಿಧ್ಯ ಮಂಡಳಿಯ ಅಧ್ಯಕ್ಷರು, ಸದಸ್ಯ ಕಾರ್ಯದರ್ಶಿಗಳು ಮತ್ತು ಅಧಿಕಾರಿಗಳು ಕರ್ನಾಟಕ ಜೀವವೈವಿಧ್ಯ ಮಂಡಳಿಗೆ ಭೇಟಿ ನೀಡಿದಾಗ ಜೀವವೈವಿಧ್ಯ ಅಧಿನಿಯಮ, 2002 ಅನುಷ್ಠಾನ ಕುರಿತಂತೆ ವಿಚಾರ ವಿನಿಮಯ ಸಭೆಯನ್ನು ನಡೆಸಲಾಯಿತು





ಜೈವಿಕ ವೈವಿಧ್ಯ ಅಧಿನಿಯಮ, 2002 ಮತ್ತು ಕರ್ನಾಟಕ ಜೈವಿಕ ವೈವಿಧ್ಯ ನಿಯಮಗಳು, 2005ರೊಂದಿಗೆ ಪರವಾನಗಿ ನೀಡುವ ಕಾರ್ಯವಿಧಾನಗಳ ಸಮನ್ವಯತೆ ಹಾಗೂ ಏಕೀಕರಣಕ್ಕಾಗಿ ಸಂಬಂಧಿಸಿದ ರಾಜ್ಯ ಇಲಾಖೆಗಳೊಂದಿಗೆ ನಡೆಸಿದ ಸಭೆಯ ಚಿತ್ರ

ಜೈವಿಕ ವೈವಿಧ್ಯ ಅಧಿನಿಯಮ, 2002ರ ಕಾಯಿದೆ ಹಾಗೂ ಅದರ ನಿಬಂಧನೆಗಳನ್ನು ಅನುಸರಣೆ ಮಾಡದವರಿಗೆ ಮಂಡಳಿಯು ಕ್ರಮ ಕೈಗೊಂಡಿರುವ ಕುರಿತು ದಿನಾಂಕ 24ನೇ ಏಪ್ರಿಲ್ 2019ರಂದು ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿ



## Cases slapped on 10 firms for exploiting bio-resources

BENGALURU: Sending out a warning message to about 250 industries that exploit the bio-resources like medicinal plants, but have consistently evaded paying 0.1% to 0.5% of their revenue towards community development, the Karnataka Biodiversity Board has field cases against 10 such companies.

Under the Access and Benefit Sharing (ABS) rules notified by the Centre in 2014, a person/company that seeks to access bioresources should get the approval of the Board. While companies with a turnover of Rs 1 crore pay 0.1%, those making up to Rs 3 crore and above Rs 5 crore pay 0.2% and 0.5%, respectively.

However, most of the Ayurveda, herbal and pharma companies that use the rich bioresource of the state have not paid the pittance of ABS contribution. After failing to elicit a response from the companies and serving multiple show-cause notices, the company filed cases against five companies last year.

Last month, the 44th Additional Chief Metropolitan Magistrate Court disposed of the case against Pradhan Herbal Company after it agreed to pay the money. "It has come as a shot in the arm for the Board to take action against recalcitrant companies which make crores of rupees but refuse to contribute to the development of the communities that ultimately protect and conserve the rich bioresources," sources in the board said.

However, officials refused to provide names of the 10 companies facing charges. "They know who they are. We want them to fall in line. If it has to happen through the courts, so be it," an official said.

"The Board is getting negligible amounts as ABS contributions. In 2017-18, it received only Rs 4 lakh from 49 applications. Sources said the companies have been adopting various strategies to escape accountability.

"According to rule, they have to take the approval of the board for accessing and exploiting the bioresources. This also allows the board to maintain a balance and take up conservation works. But hardly any company cooperates though we are not asking them to reveal business secrets like a formula for the preparation of a particular product," an official said.

Officials said 16 plants had entered the list of threatened species due to over-exploitation. "The list is only going to grow if not monitored," they said.

DH News Service



**ಜೈವಿಕ ವೈವಿಧ್ಯ ಅಧಿನಿಯಮ, 2002ರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ವ್ಯಾಖ್ಯಾನ ಮತ್ತು ವಿವರಣಾತ್ಮಕ ಸವಾಲುಗಳನ್ನು ಬಗೆಹರಿಸಲು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದ ಅಧ್ಯಕ್ಷರಾದ ಡಾ॥ ಬಾಲಕೃಷ್ಣ ಪಿಶುಪತಿರವರ ಅಧ್ಯಕ್ಷತೆಯಲ್ಲಿ ದಿನಾಂಕ 6ನೇ ಮೇ 2019ರಂದು ನಡೆದ ಜೈವಿಕ ವೈವಿಧ್ಯ ಅಧಿನಿಯಮ, 2002ರ ಮೊದಲ ವಿಶೇಷ ಸಭೆಯ ಚಿತ್ರ**






**ದಿನಾಂಕ 28ನೇ ಮೇ 2019ರಂದು ದೂರದರ್ಶನದ ಚಂದನ ವಾಹಿನಿಯಲ್ಲಿ ಮಂಡಳಿಯ ಸದಸ್ಯರಾದ ಡಾ। ನಿರಂಜನ ಮೂರ್ತಿ ಹಾಗೂ ಸಮಾಲೋಚಕರಾದ ಶ್ರೀಮತಿ. ವೀಣಾ ಪಿ. ಜಿ. ರವರು ಭಾಗವಹಿಸಿದ "ಜೀವವೈವಿಧ್ಯತೆ ಮತ್ತು ಕೃಷಿ" ನೇರಪ್ರಸಾರ ಕಾರ್ಯಕ್ರಮದ ಚಿತ್ರ**



ಕರ್ನಾಟಕ ಜೀವವೈವಿಧ್ಯ ಮಂಡಳಿಯ ಅಧ್ಯಕ್ಷರಾದಎಸ್. ಪಿ. ಶೇಷಾದ್ರಿಯವರು ಮಂಡಳಿಯ ಸದಸ್ಯರಾದ ಡಾ.ಎಂ.ಮಹದೇವಮೂರ್ತಿ, ಡಾ.ಜಯಕರ ಭಂಡಾರಿ, ಡಾ. ಸಿ. ಜಿ. ಕುಶಾಲಪ್ಪ ಮತ್ತು ಡಾ. ನಿರಂಜನಮೂರ್ತಿಯವರೊಂದಿಗೆ ಜನವರಿ 11, 2019 ರಂದು ಮಂಗಳೂರಿನ ಪಿಲಿಕುಳ ನಿಸರ್ಗಧಾಮಕ್ಕೆ ಭೇಟಿಕೊಟ್ಟು ಮಂಡಳಿಯ ಅನುದಾನದ ಸಂಶೋಧನಾ ಪ್ರಾಯೋಜನೆಯಾದ "ಪಶ್ಚಿಮ ಘಟ್ಟಗಳ ಗಿಡಮೂಲಿಕೆಗಳ ಸಂಗ್ರಹಾಗಾರ, ಸಸ್ಯೋದ್ಯಾನದ ನಿರ್ಮಾಣ ಮತ್ತು ಪಶ್ಚಿಮ ಘಟ್ಟ ಹಾಗೂ ಕರಾವಳಿ ಪ್ರದೇಶದ ದೇವರ ಕಾಡುಗಳ ಸಮೀಕ್ಷೆ, ಗುರುತು ಹಚ್ಚುವಿಕೆ ಮತ್ತು ವರದಿ ತಯಾರಿಕೆ" ಯ ಪ್ರಗತಿ ಪರಿಶೀಲನೆ ಮಾಡಿದರು. ಮಂಡಳಿಯ ಸಿಬ್ಬಂದಿಯಾದ ಶ್ರೀಮತಿ ಸಹನಾ ಹೆಗ್ಡೆ, ಉಪನಿರ್ದೇಶಕರು (ತೋಟಗಾರಿಕೆ), ಪ್ರೀತಮ್ ಎಸ್. ಸಂಶೋಧನಾ ಸಹಾಯಕರು (ಪ್ರಾಣಿ ವಿಜ್ಞಾನ) ಭಾಗವಹಿಸಿದ್ದರು. ಪ್ರಾಯೋಜನೆಯ ಪ್ರಧಾನ ಸಂಶೋಧಕರಾದ ಡಾ. ಸೂರ್ಯಪ್ರಕಾಶ್ ಶೆಣೈ, ಪ್ರಧಾನ ವಿಜ್ಞಾನಿ ಲೋಬೋ, ಜೆ.ಆರ್., ನಿಸರ್ಗಧಾಮದ ಆಡಳಿತ ಸಮಿತಿಯ ಸದಸ್ಯರು ಹಾಗೂ ಮಂಗಳೂರಿನ ಮಾಜಿ ಶಾಸಕರಾದ ಶ್ರೀ ರಾಮಕೃಷ್ಣ ಮರಾಠಿ, ವೈಜ್ಞಾನಿಕ ಅಧಿಕಾರಿ ಬಾಬು ದೇವಾಡಿಗ ಮತ್ತು ಆಡಳಿತ ಅಧಿಕಾರಿಯವರು ಹಾಜರಿದ್ದರು.

## 2018–19 ನೇ ಸಾಲಿನ ಜೀವವೈವಿಧ್ಯ ಪ್ರಶಸ್ತಿ

ಕರ್ನಾಟಕ ಜೀವವೈವಿಧ್ಯ ಮಂಡಳಿಯು 2018–19 ನೇ ಸಾಲಿನ "ಜೀವವೈವಿಧ್ಯ ಪ್ರಶಸ್ತಿ"ಯನ್ನು "ಅಂತರರಾಷ್ಟ್ರೀಯ ಜೀವವೈವಿಧ್ಯ ದಿನ" ಮೇ 22 ರಂದು ನಡೆದ ಕಾರ್ಯಕ್ರಮದಲ್ಲಿ ಜೀವವೈವಿಧ್ಯ ಸಂರಕ್ಷಣೆ, ಅವುಗಳ ಸುಸ್ಥಿರ ಬಳಕೆ, ಜೈವಿಕ ಸಂಪನ್ಮೂಲಗಳ ಲಾಭ ಮತ್ತು ನ್ಯಾಯ ಸಮ್ಮತ ಹಂಚಿಕೆ, ಪಾರಂಪರಿಕ ಜ್ಞಾನಗಳಲ್ಲಿ ವಿಶಿಷ್ಟ ಸಾಧನೆ ಮಾಡಿದ ವ್ಯಕ್ತಿ ಮತ್ತು ಸಂಸ್ಥೆಗಳು ಸಲ್ಲಿಸಿರುವ ಸೇವೆಯನ್ನು ಗುರುತಿಸಿ 3 ವಿಭಾಗಗಳಲ್ಲಿ ತಲಾ ಒಬ್ಬರು ವ್ಯಕ್ತಿ / ಒಂದು ಸಂಸ್ಥೆಗೆ ರೂ.25,000/– ಹಾಗೂ ಪ್ರಶಸ್ತಿ ಫಲಕಗಳನ್ನು ನೀಡಿ ಗೌರವಿಸಲಾಯಿತು.




**ಪ್ರಶಸ್ತಿಗಳನ್ನು ಪಡೆದ ವ್ಯಕ್ತಿ ಮತ್ತು ಸಂಸ್ಥೆಗಳ ವಿವರ**

1. **ಸಾಮಾನ್ಯ ವಿಭಾಗ :** ಶ್ರೀ. ಸಾಲು ಮರದ ನಿಂಗಣ್ಣ, ಆರೆಹಳ್ಳಿ, ಕೂಟಗಲ್ ಹೋಬಳಿ, ರಾಮನಗರ ಜಿಲ್ಲೆ.
2. **ಕೃಷಿ ಜೀವವೈವಿಧ್ಯತೆ :** ಸಹಜ ಸಮೃದ್ಧ ಸಂಸ್ಥೆ, ಬೆಂಗಳೂರು.
3. **ಜೀವವೈವಿಧ್ಯತೆ ಮಹಿಳಾ ಪ್ರಶಸ್ತಿ :** ಕಾನನ ಕೃಷಿಕ ಮಹಿಳೆಯರ ಸಂಘ, ಮಾಲಂಗಿ ಪಂಚಾಯಿತಿ, ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ.

ಪದ್ಮಶ್ರೀ ಸಾಲುಮರದ ತಿಮ್ಮಕ್ಕನವರು ಅಂತರರಾಷ್ಟ್ರೀಯ ಜೀವವೈವಿಧ್ಯ ದಿನದ ಮುಖ್ಯ ಅತಿಥಿಯಾಗಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಇವರು ಜೀವವೈವಿಧ್ಯತೆ ಮತ್ತು ಪರಿಸರ ಸಂರಕ್ಷಣೆ ಕ್ಷೇತ್ರದಲ್ಲಿ ಸಲ್ಲಿಸಿರುವ ಗಣನೀಯ ಸೇವೆಗೆ ಮಂಡಳಿಯು ವಿಶೇಷ ಜೀವವೈವಿಧ್ಯ ಪ್ರಶಸ್ತಿಯನ್ನು ಸನ್ಮಾನದೊಂದಿಗೆ ರೂ. 25,000/– ಪ್ರೋತ್ಸಾಹಧನ ಮತ್ತು ಪ್ರಶಸ್ತಿ ಫಲಕ ಪತ್ರಗಳನ್ನು ನೀಡಿ ಗೌರವಿಸಿತು.

– **ಎಸ್. ಶೃತಿ,** ತಾಂತ್ರಿಕ ಕಾರ್ಯನಿರ್ವಾಹಕರು, ಸಸ್ಯ ವರ್ಗೀಕರಣ

Printed Matter Book Post

To,

If undelivered please return to :

**KARNATAKA BIODIVERSITY BOARD**
Ground Floor, "Vana Vikas", 18th Cross,
Malleshwaram, Bengaluru - 560 003

## ಜೀವವೈವಿಧ್ಯ ಪಾರಂಪರಿಕ ತಾಣ

ಕಳೆದ ಸಂಚಿಕೆಯಲ್ಲಿ ಜೀವವೈವಿಧ್ಯ ಪಾರಂಪರಿಕ ತಾಣವಾದ ದೇವನಹಳ್ಳಿ ಬಳಿಯ ನಲ್ಲೂರು ಹುಣಸೇತೋಪಿನ ಕುರಿತು ಲಘು ಟಿಪ್ಪಣಿಯನ್ನು ಪ್ರಕಟಿಸಲಾಗಿತ್ತು. ಈ ಸಂಚಿಕೆಯಲ್ಲಿ ಅಂತಹುದೇ ತಾಣವಾದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 'ಗಾಂಧಿ ಕೃಷಿ ವಿಜ್ಞಾನಕೇಂದ್ರ'ದ ಕುರಿತ ಲಘು ಟಿಪ್ಪಣಿ.

### ಗಾಂಧಿ ಕೃಷಿ ವಿಜ್ಞಾನ ಕೇಂದ್ರ

ಗಾಂಧಿ ಕೃಷಿ ವಿಜ್ಞಾನ ಕೇಂದ್ರವು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಮೃದ್ಧ ಭಾಗವಾಗಿದೆ. ಸರ್ಕಾರದ ರಾಜ್ಯಪತ್ರ ಸಂಖ್ಯೆ: FEE 132 ENV 2009, ಬೆಂಗಳೂರು, ದಿನಾಂಕ: 02.09.2010ರ ಮೂಲಕ ಕರ್ನಾಟಕ ರಾಜ್ಯದ ಎರಡನೆಯ ಪಾರಂಪರಿಕ ತಾಣವಾಗಿ ಘೋಷಣೆಯಾಗಿದೆ. ಈ ಪ್ರದೇಶದ ವಿಸ್ತೀರ್ಣವು 167 ಹೆಕ್ಟೇರ್‌ಗಳು. ಇದು ನಗರ ಜೀವವೈವಿಧ್ಯತೆಗೆ (Urban Biodiversity) ಪ್ರಸಿದ್ಧಿಯಾಗಿದೆ. ಇಲ್ಲಿ ಕೃಷಿ ಜೀವವೈವಿಧ್ಯತೆಯ ಸಂರಕ್ಷಣೆ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ, ಜೈವಿಕ ತಂತ್ರಜ್ಞಾನ ಹಾಗೂ ಸಸ್ಯ ಸಂಶೋಧನಾ ಘಟಕಗಳ ಸ್ಥಾಪನೆಯಾಗಿರುತ್ತದೆ.



ಸುಮಾರು 600 ಪ್ರಮುಖ ಔಷಧೀಯ ಮತ್ತು ಇತರೆ ಫಲ–ಪುಷ್ಪ ಸಸ್ಯಗಳು ಇಲ್ಲಿವೆ. ಕೃಷಿಗೆ ಸಂಬಂಧಿಸಿದ ಪ್ರಮುಖ ಸೂಕ್ಷ್ಮಾಣು ಜೀವಿಗಳಿಗೆ ಈ ಪ್ರದೇಶವು ಮುಖ್ಯ ನೆಲೆಯಾಗಿದೆ. ಪುರಾತನ ಕಾಲದ ಸಸ್ಯಸಂಕುಲಗಳ ಸಂಗ್ರಹಣೆಯಿದೆ. ವಿಶೇಷ ತಳಿಗಳ ಗಿಡ–ಮರಗಳನ್ನು ಬೆಳೆಸಲಾಗಿದೆ. ವಿಸ್ತಾರವಾದ ಹಸಿರಿನಿಂದ ಕೂಡಿರುವ ಈ ಪ್ರದೇಶದಲ್ಲಿ– ಕಾಡು ಪಾಪ *(Loris lydekkerianus)*, ಮುಂಗುಸಿ *(Herpestes edwardsii)*, ನರಿ *(Canis aureus)*, ಕಾಡುಬೆಕ್ಕು *(Felis catus)*, ಕಾಡು ಹಂದಿ *(Sus scrofa)* ಇವುಗಳನ್ನೊಳಗೊಂಡಂತೆ ಸುಮಾರು 13 ಸಸ್ತನಿಗಳು, 10 ಜಾತಿಯ ಸರೀಸೃಪಗಳು, 165 ವಿವಿಧ ಬಗೆಯ ಪಕ್ಷಿಗಳು, 96 ಚಿಟ್ಟೆ ಪ್ರಭೇದಗಳು, 172 ಜೇನು ಗೂಡುಗಳು ಪ್ರಾಕೃತಿಕವಾಗಿ ಲಭ್ಯವಿರುತ್ತವೆ. ಸರಿಸುಮಾರು 1,50,000 ಕೀಟತಳಿಗಳನ್ನು ವೈಜ್ಞಾನಿಕ ಸಂಗ್ರಹಾಲಯದಲ್ಲಿ ಶೇಖರಿಸಲಾಗಿದೆ.

– **ಪ್ರೀತಮ್,** ಸಂಶೋಧನಾ ಸಹಾಯಕರು (ಪ್ರಾಣಿ ವಿಜ್ಞಾನ)


***Biodiversity News Letter Publication Committee***

Chief Patrons : S. P. Sheshadri, Chairman,
Dr. Virender Singh, APCCF & Member Secretary
Editor : Prof. M. Narayana Swamy, Member, KBB
Editorial Board: N. Shantha Kumar, DCF,
Dr. B. V. Purushotham, DD (AYUSH),
Sahana S. Hegde, DD (Hort.),
Dakshayanamma, G., ACF,
Veena, P. G., Consultant - ABS,
Ishwarya, B. N., Consultant - PBR,
Pritham, S., R. A. (Zoology),
Shruthi, S., T.E. (Taxonomy),
Prasanna. K. R., T. E. (Botany)
Vijayalakshmi H, T. E. (Agri.)
Dr. C.R.Jawahar, RA (Botany), KBB
With Printing Assistance by Puttaraju, S. P. (EA) and staff, KBB.
Printed by *'Sadguru Screens'*